# ಸಂನ್ಯಾಸ ಮತ್ತು ಗೃಹಸ್ಥ ಜೀವನ: ಭಿನ್ನ ಆಧ್ಯಾತ್ಮಿಕ ಮಾರ್ಗಗಳು

**ಡಾ. ಹೆಚ್. ಪಾಂಡುರಂಗ ವಿಠಲ**

ವಿಭಿನ್ನ ತಾತ್ತ್ವಿಕ ದೃಷ್ಟಿಕೋನಗಳಿಗೆ ಅನುಗುಣವಾಗಿ ಬೇರೆ ಬೇರೆ ಆದರ್ಶಗಳು ಭಿನ್ನವಾದ ಜೀವನ ಗುರಿಯನ್ನು ರೂಪಿಸುತ್ತವೆ. ಹೀಗೆ ರೂಪುಗೊಂಡ ಎರಡು ಪ್ರಧಾನ ಜೀವನ ಮಾರ್ಗಗಳೇ ಸಂನ್ಯಾಸ ಹಾಗೂ ಗೃಹಸ್ಥ ಜೀವನಕ್ರಮ. ಇವೆರಡೂ ಮಾನವನನ್ನು ಅತಿ ಶ್ರೇಷ್ಠವಾದ ಪರಮಾರ್ಥದೆಡೆಗೆ ಒಯ್ಯುವುದು; ಅದಕ್ಕಾಗಿ ಹಲವು ನೈತಿಕ, ಸಾಮಾಜಿಕ ನಿಯಮ, ಸಂಪ್ರದಾಯ, ಪದ್ಧತಿಗಳು ಬೆಳೆದು ಬಂದಿವೆ. ಈ ಕುರಿತು ಬರೆದಿರುವ ಲೇಖಕರು ಮೈಸೂರಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಒಳ್ಳೆಯ ಚಿಂತಕರೂ, ಬರಹಗಾರರೂ ಆಗಿರುವ ಇವರ ಅನೇಕ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.



**ಮಾ**ನವ ಜೀವನವನ್ನು ಭಾರತೀಯರು ನಾಲ್ಕು ಆಶ್ರಮಗಳನ್ನಾಗಿ ವಿಂಗಡಿಸಿದ್ದಾರೆ. ಇವು ವ್ಯಕ್ತಿತ್ವದ ವಿಕಾಸದ, ಅಭಿವೃದ್ಧಿಯ ಹಂತಗಳು. ಶೈಶವ, ಬಾಲ್ಯ, ವಿದ್ಯಾರ್ಥಿಜೀವನದ ಹಂತವನ್ನು ಬ್ರಹ್ಮಚರ್ಯ ಆಶ್ರಮ ಎನ್ನುತ್ತಾರೆ. ತಂದೆತಾಯಂದಿರ ಪೋಷಣೆಯಲ್ಲಿ ಬೆಳೆಯುವ ಬಾಲ್ಯದ ಹಂತದಲ್ಲಿ ಭಾಷೆ, ಸೌಜನ್ಯ, ಪ್ರೀತಿಸುವಿಕೆಯನ್ನು ಕಲಿತ ಮಗು ಎಂಟು ವರ್ಷವಾದ ಬಳಿಕ ಗುರುಕುಲಕ್ಕೆ ಹೋಗುತ್ತಿದ್ದ. ಇಲ್ಲಿ ಅವನ ಗುರಿ ಬೇರೆ. ಮನೋನಿಗ್ರಹದೊಡನೆ ಮುಂದಿನ ಜೀವನಕ್ಕೆ ಬೇಕಾದ ಎಲ್ಲ ಕೌಶಲ್ಯಗಳನ್ನು ಪ್ರಾಯೋಗಿಕ ತರಬೇತಿಯೊಡನೆ ವಿದ್ಯಾರ್ಥಿ ಕಲಿಯುವುದಲ್ಲದೆ, ತನ್ನ ಇಚ್ಛೆಯಂತೆ ಒಂದು ವಿದ್ಯೆಯನ್ನು ಗುರುಗಳಿಂದ ಕಲಿಯುತ್ತಿದ್ದ. ಗುರುಕುಲದಲ್ಲಿ ನಸುಕಿನಲ್ಲೆ ಎದ್ದು, ಪ್ರಾತರ್ವಿಧಿಗಳನ್ನು ಪೂರೈಸಿ, ಗುರುಪತ್ನಿ ಸೂಚಿಸಿದಂತೆ ಕೆಲಸಗಳನ್ನು ಮಾಡಿ, ಪಠಣ, ಪಾರಾಯಣ, ಅಧ್ಯಯನಗಳ ಆರಂಭ ಮಾಡುತ್ತಿದ್ದ. ಉಪನಯನದ ದೀಕ್ಷೆಯ ಅನಂತರ ತನ್ನ ಶಾಖೆಯ ವೇದಮಂತ್ರಗಳ ಕಲಿಕೆ. ಬ್ರಹ್ಮಚಾರಿಯಾಗಿರುವಾಗ ಆತ ಜಿಜ್ಞಾಸೆ, ಶ್ರದ್ಧೆ, ಶಕ್ತಿ, ನೀತಿ, ಸೇವೆಗಳೆಂಬ ಪಂಚಶೀಲಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾನೆ. ಹನ್ನೆರಡು ವರ್ಷ ಹೀಗೆ ಜೀವಿಸಿ, ಸಮಾವರ್ತನೆಯೊಡನೆ ಸ್ನಾತಕನಾಗಿ ಹೊರಬಂದ ಮೇಲೆ ಮನೆಗೆ ಬಂದು ಮದುವೆಯಾಗಿ, ಮುಂದಿನ ಹಂತದ ಜೀವನವನ್ನು ಆರಂಭಿಸುತ್ತಿದ್ದ. ಇದೇ ಗೃಹಸ್ಥ ಆಶ್ರಮ. ಬ್ರಹ್ಮ ಚಾರಿಯಾಗಿ ಕಳೆದ ಹನ್ನೆರಡು ವರ್ಷದ ಶಿಸ್ತು, ಅಭ್ಯಾಸಗಳು, ಮನೋ ನಿಯಂತ್ರಣಗಳು ವ್ಯಕ್ತಿತ್ವದ ಭಾಗವಾಗಿ, ಆತನು ಹೊಸ ಜವಾಬ್ದಾರಿಗಳೊಡನೆ ತನ್ನ ಜೀವನವನ್ನು ಮುನ್ನಡೆಸಲು ಅನುವು ಮಾಡಿಕೊಡುತ್ತಿದ್ದವು.

ಇಲ್ಲಿ ಸಂಗಸುಖದಿಂದ ದೂರ ಇದ್ದು, ಆತ್ಮಸಂಯಮದ ಆಚರಣೆಯಿಂದ ಮಾಡುವ ವೀರ್ಯಧಾರಣೆಯೇ ಬ್ರಹ್ಮ ಚರ್ಯ ಎಂಬ ಅರ್ಥವನ್ನೂ ಪರಿಭಾವಿಸಬೇಕು. ಅಖಂಡವಾಗಿ ಆಮರಣಾಂತ ಬ್ರಹ್ಮಚರ್ಯ ಪಾಲನೆ ಮಾಡುವವರು ನೈಷ್ಠಿಕ ಬ್ರಹ್ಮಚಾರಿಗಳು. ಲೋಕಕಲ್ಯಾಣ, ದೇವಸಾಕ್ಷಾತ್ಕಾರವೇ ಗುರಿಯಾಗುಳ್ಳ ಸಂನ್ಯಾಸಿಗಳು ನೈಷ್ಠಿಕ ಬ್ರಹ್ಮಚರ್ಯ ಪಾಲಿಸಿ, ದೇವತ್ವಕ್ಕೆ ಏರುತ್ತಿದ್ದರು. ಗೃಹಸ್ಥಾಶ್ರಮ ಸ್ವೀಕರಿಸುವವರೆಗೆ ಮಾತ್ರ ಬ್ರಹ್ಮಚಾರಿಯಾಗಿರುವವರು ಉಪಕುರ್ವಾಣ ಬ್ರಹ್ಮಚಾರಿಗಳು. ಸ್ವಪತ್ನಿಯಲ್ಲಿ ಶಾಸ್ತ್ರವಿಹಿತ ದಿನಗಳಲ್ಲಿ ಮಾತ್ರ ಸಂಪರ್ಕವನ್ನು ಪರಿಮಿತವಾಗಿ ಪಡೆಯುವ ಗೃಹಸ್ಥನೂ ಬ್ರಹ್ಮಚಾರಿಯೇ; ತಿರುಗಿ ವಿಷಯಾಸಕ್ತಿ ಬಾರದಂತಹ ಆಹಾರ ವಿಹಾರಗಳಲ್ಲಿರುವ ವಾನಪ್ರಸ್ಥನೂ ಬ್ರಹ್ಮಚಾರಿಯೇ ಎಂದು ಪರಿಗಣಿತನಾಗುತ್ತಾನೆ. ಇತರ ಧರ್ಮಗಳಲ್ಲೂ ಬ್ರಹ್ಮಚರ್ಯಕ್ಕೆ ಪ್ರಮುಖ ಸ್ಥಾನ ಇದೆ. ಪಾರ್ಶ್ವನಾಥನ ಕಾಲದಲ್ಲಿದ್ದ ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹಗಳೆಂಬ ಚಾತುರ್ಯಾಮ ಪದ್ಧತಿಗೆ ಮಹಾವೀರನು ಬ್ರಹ್ಮ ಚರ್ಯವನ್ನು ಸೇರಿಸಿ ಗೃಹಸ್ಥರಿಗೆ ಪಂಚಾಣು ವ್ರತ, ಮುನಿಗಳಿಗೆ

ಪಂಚ ಮಹಾವ್ರತಗಳೆಂದು ವಿಧಿಸಿದ. ಕ್ಯಾಥೋಲಿಕ್ ಧರ್ಮದಲ್ಲೂ ಧರ್ಮಗುರುಗಳು ಲಗ್ನವಾಗಬಾರದು ಎಂಬ ನೈತಿಕ ಗುಣವನ್ನು ವಿಧಿಸಲಾಗಿದೆ.

ಜಿತೇಂದ್ರಿಯತ್ವವು ಬ್ರಹ್ಮಚಾರಿಗಳು, ಗೃಹಸ್ಥರಿಗೆ ಹೇಗೋ ಸಂನ್ಯಾಸಿಗಳಿಗೂ ಅವಶ್ಯ. ಕೃಷ್ಣ ಅಂಥವನನ್ನು ಯೋಗಿ ಎಂದು ಕರೆಯುತ್ತಾನೆ. '**ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ**' *(ಗೀತೆ ೬-೮)* ಬುದ್ಧಿಯಿಂದ ಗಳಿಸಿಕೊಂಡ ಜ್ಞಾನ ಮತ್ತು ಆ ತಿಳಿವಳಿಕೆಯನ್ನು ಅನುಭವಕ್ಕೆ ತಂದುಕೊಳ್ಳುವ ವಿಜ್ಞಾನ ಇವನ್ನು ಸಂಪಾದಿಸಿ, ಇಂದ್ರಿಯಗಳ ಉಪಟಳಕ್ಕೆ ಒಳಗಾಗದ ತೃಪ್ತಾತ್ಮನು, ಆತ್ಮಕ್ಕೆ ಹೊರತಾದ ವಸ್ತುಗಳಿಂದ ಬೇರೆಯಾಗಿರುವ ಕೂಟಸ್ಥ, ಭಾವವಿಕಾರಕ್ಕೆ ಒಳಗಾಗದ ವಿಜಿತೇಂದ್ರಿಯನು ಅಥವಾ ಬ್ರಹ್ಮಚಾರಿವ್ರತದಲ್ಲಿ ಸ್ಥಿತನು *(ಗೀತೆ ೬-೧೪)* ಯೋಗಿ ಎಂದು ಹೇಳುತ್ತಾನೆ. ಗೀತೆಯ ಆರನೆಯ ಅಧ್ಯಾಯ ಈ ಸ್ಥಿತಿಯನ್ನು ಸಾಧಿಸುವ ಸಾಧನೆ ಧ್ಯಾನಾಭ್ಯಾಸಯೋಗವನ್ನು ವಿವರಿಸುತ್ತದೆ. ಮೊದಲನೆಯ ಆಶ್ರಮವಾದ ಬ್ರಹ್ಮಚರ್ಯಾಶ್ರಮದಲ್ಲೇ ನೈತಿಕತೆ, ಸಂಯಮ, ಇಂದ್ರಿಯನಿಗ್ರಹಗಳನ್ನು ಹೇಳಿದ್ದು, ಸಾಧನೆಯ ಕೊನೆಯವರೆಗೆ ಇವು ಅವಶ್ಯ. ಬ್ರಹ್ಮಚರ್ಯವೆಂದರೆ ಪರಬ್ರಹ್ಮನ ಕಡೆಗೆ ಹೋಗುವ ದೀಕ್ಷೆ, ನಿರಂತರ ವೇದಾಧ್ಯಯನ ಮಾಡುತ್ತ ನಿಯಮಿತ ಲೈಂಗಿಕತೆ ಪಾಲಿಸುವ ಗಾರ್ಹಸ್ಥ್ಯ, ಹಾಗೂ ಲೈಂಗಿಕ ಮುಕ್ತ ವೈರಾಗ್ಯ.

ಶಬರಿಯಂತೆ ಗೃಹಸ್ಥನ ಅಭ್ಯಾಸವು ನಿಯತವಾಗಿರಬೇಕು. ಪ್ರಾಪ್ತಿಯ ಭಾವ ಇಲ್ಲದೆ ಕಾರ್ಯಮಗ್ನರಾಗಲು ಶ್ರದ್ಧೆ, ವಿಶ್ವಾಸ ಅಗತ್ಯ. ಗೃಹಸ್ಥ ಜೀವನದಲ್ಲಿ ಕಾಲದ ಕೊರತೆ ಹೆಚ್ಚು. ಕಾಲ ಸಿಕ್ಕಾಗಲೂ ಅಭ್ಯಾಸದ ಕಡೆಗೆ ಮನಸ್ಸು ಹೋಗುವುದು ಕಷ್ಟ. ಸಂತೋಷ, ನೆಮ್ಮದಿಗಳನ್ನು ಅನುಭವಿಸುವವರಿಗಂತೂ ಈ ಮಾತು ಹೆಚ್ಚು ನಿಜ. ಸುಭಾಷಿತವೊಂದು ಹೇಳುವಂತೆ:

**ಮಾನುಷ್ಯಂ ವರಜನ್ಮವಿಭವೋ ದೀರ್ಘಾಯುರಾರೋಗ್ಯತಾ**
**ಸನ್ಮಿತ್ರಂ ಸುಸುತಃ ಸತೀ ಪ್ರಿಯತಮಾ ಭಕ್ತಿಶ್ಚ ನಾರಾಯಣೇ ।**
**ವಿದ್ವತ್ವಂ ಸುಜನತ್ವಮಿಂದ್ರಿಯಜಯಃ ಸತ್ಪಾತ್ರದಾನೇ ರತಿಃ**
**ತೇ ಪುಣ್ಯೇನ ವಿನಾ ತ್ರಯೋದಶಗುಣಾಃ ಸಂಸಾರಿಣಾಂ ದುರ್ಲಭಾಃ॥**

ಮನುಷ್ಯನಾಗಿ, ಅದರಲ್ಲೂ ಉತ್ತಮವಂಶದಲ್ಲಿ ಜನ್ಮ, ಸಂಪತ್ತು, ದೀರ್ಘಾಯುಷ್ಯ, ಆರೋಗ್ಯ, ಉತ್ತಮ ಸ್ನೇಹಿತ, ವಿಧೇಯ ಮಗ, ಪ್ರೀತಿಸುವ ಹೆಂಡತಿ, ನಾರಾಯಣನಲ್ಲಿ ಭಕ್ತಿ, ವಿದ್ಯೆ, ಒಳ್ಳೆಯವನೆಂಬ ಕೀರ್ತಿ, ಇಂದ್ರಿಯಗಳನ್ನು ಗೆದ್ದಿರುವುದು, ಸತ್ಪಾತ್ರರಿಗೆ ದಾನ ಮಾಡುವುದರಲ್ಲಿ ಪ್ರೀತಿ ಈ ಹದಿಮೂರು ಗುಣಗಳು ಸಂಸಾರಿಗಳಿಗೆ ದುರ್ಲಭವಾಗಿದ್ದು, ಪುಣ್ಯದಿಂದ ಮಾತ್ರ ದೊರಕುವುದು. ವೇದಕಾಲದಲ್ಲಿ ಧರ್ಮ, ಅರ್ಥ, ಕಾಮ ಮೂರೇ ಪುರುಷಾರ್ಥಗಳಿದ್ದು, ಉಪನಿಷತ್ತುಗಳ ಕಾಲಕ್ಕೆ ಮೋಕ್ಷ ನಾಲ್ಕನೆಯದಾಗಿ ಸೇರಿತು. ಯಾಜ್ಞವಲ್ಕ್ಯ ಸ್ಮೃತಿಯು ಅಹಿಂಸೆ, ಸತ್ಯವಚನ, ಪರಿಶುದ್ಧತೆ, ಮನಸ್ಸು ದೇಹಗಳ ಶುಚಿ, ಇಂದ್ರಿಯ ನಿಗ್ರಹ, ದಾನ, ಸಂಯಮ ದಯೆ, ಶಾಂತಿ ಇವು ಗೃಹಸ್ಥ ಧರ್ಮ ಸಾಧನೆಗೆ ಅಗತ್ಯವೆನ್ನುತ್ತದೆ. ಇಂತಹ ಸಂಸಾರಿಯು ಸಮಾಜದ ಹಿತವನ್ನು ಬಯಸುತ್ತ, ದೈಹಿಕ, ಮಾನಸಿಕ ಆಧ್ಯಾತ್ಮಿಕ ಉನ್ನತಿಗಾಗಿ, ದೈವಕೃಪೆಗಾಗಿ ಸೇವಾಕಾರ್ಯಗಳನ್ನು ನಡೆಸುವನು. ಧರ್ಮ, ಸಂಸ್ಕೃತಿಗಳ ರಕ್ಷಣೆ, ದೇಶದ ಏಳಿಗೆಗೆ ಅವನ ಸಹಕಾರ ಇದೆ. 'ಸಂಸಾರದಲ್ಲಿ ಜೀವಿಸಿ, ಆದರೆ ನಿಮ್ಮೊಳಗೆ ಸಂಸಾರ ಇರಬಾರದು' ಎನ್ನುತ್ತಾರೆ ಶ್ರೀರಾಮಕೃಷ್ಣರು.

ಗೃಹವುಳ್ಳವನೇ ಗೃಹಸ್ಥ ಎಂದರೆ, ಒಂದು ಕಡೆ ನೆಲೆಯಾಗಿ ನಿಂತವ. ಗೃಹವೆನ್ನುವುದು ಬರೀ ಮನೆಯಲ್ಲ, ಪತ್ನೀಪುತ್ರ ಬಂಧುಮಿತ್ರರೊಡನೆ ಇದ್ದು, ಪರಮ ಧರ್ಮವಾದ ಅತಿಥಿ ಸತ್ಕಾರವನ್ನು ನಡೆಸುತ್ತಿರುವುದು. ಹಿಂದಿನ ಋಷಿಗಳೆಲ್ಲ ಗೃಹಸ್ಥರಾಗಿದ್ದರು. ಮೃತ್ಯುದೇವತೆಯಾದ ಯಮನು ಗೃಹಸ್ಥನಾಗಿದ್ದು ಅತಿಥಿಯಾಗಿ ಬಂದ ನಚಿಕೇತನಿಗೆ ಸಮಯಕ್ಕೆ ಸರಿಯಾಗಿ ಸತ್ಕಾರವನ್ನು ಮಾಡದೆ ಇದ್ದುದರಿಂದ ಮೂರು ವರಗಳನ್ನು ಕೊಟ್ಟನೆಂದು ಕಠೋಪನಿಷತ್ತಿನಲ್ಲಿದೆ. ಪತ್ನೀಪುತ್ರಾದಿಗಳಂತೆ ಬ್ರಹ್ಮಚಾರಿಗಳು, ಸಂನ್ಯಾಸಿಗಳೂ ಗೃಹಸ್ಥನನ್ನೇ ಆಶ್ರಯಿಸಿರುತ್ತಾರೆ. ಗೃಹಸ್ಥನಿಗೆ ಹೇಳಿರುವ ಶ್ರೌತಸ್ಮಾರ್ತಕರ್ಮಗಳು, ದೈವಪಿತ್ರಾದಿಗಳನ್ನು ಸಂತೋಷಗೊಳಿಸುವ ಹವ್ಯಕವ್ಯಗಳು, ದಾನಧರ್ಮ ಪರೋಪಕಾರಗಳು, ಇಷ್ಟಾಪೂರ್ತಗಳು ಈ ಧರ್ಮಗಳನ್ನು ನಿರ್ವಹಿಸುವುದು ಸಹಕರಿಸುವುದು ಗೃಹಿಣಿಯ ಹೊಣೆ. ಗೃಹಸ್ಥನ ಹೃದಯ ವಿಶಾಲವಾದಾಗ ಭಗವಂತನು ಅನುಗ್ರಹಿಸುವನು. ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಸುಖಗಳ ಸಾಮರಸ್ಯವೇ ಗೃಹಸ್ಥಾಶ್ರಮದ ವಿಶೇಷ. ಸತಿಪತಿಗಳು ನಂಬಿಕೆ ವಿಶ್ವಾಸಗಳಿಂದ ಬದುಕಿ ನೆಮ್ಮದಿ ಪಡೆಯಬೇಕು. ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಈ ಮೂರೂ ಜೀವನದ ಘಟ್ಟಗಳಲ್ಲಿರುವವರಿಗೆ ಅನ್ನ, ಶಿಕ್ಷಣವಿತ್ತು ಆಶ್ರಯ ನೀಡುವ ಗೃಹಸ್ಥಾಶ್ರಮವೇ ಧನ್ಯ ಎಂದು 'ಚಾಣಕ್ಯ ನೀತಿ'ಯಲ್ಲಿ ಹೇಳಿದೆ.

ವಿದೇಶೀಯರಲ್ಲಿ ಮದುವೆಯು ಒಪ್ಪಂದವಾಗಿದ್ದರೆ ಇಲ್ಲಿ ಅದು ಸಂಸಾರ ಸಾರ. ಭಾವನಾತ್ಮಕವಾಗಿ ಒಂದಾದ ಗಂಡ ಹೆಂಡಿರು ಕುಟುಂಬವನ್ನು ನಿರ್ಮಾಣ ಮಾಡಿ, ಸಾಧನೆ ಮಾಡುತ್ತಾರೆ. ಇಲ್ಲಿ ಹಕ್ಕುಗಳಿಗೆ ಒತ್ತಾಯವಿಲ್ಲ, ಕರ್ತವ್ಯಗಳ ಜವಾಬ್ದಾರಿ ಇದೆ. ಪರಂಪರಾಗತ ಗುಣಗಳ ಬೆಳವಣಿಗೆ ಇದೆ. ಪಾಶ್ಚಿಮಾತ್ಯರ ಅನುಕರಣೆಯಿಂದ ಕೌಟುಂಬಿಕ ಸಂಬಂಧಗಳು ಶಿಥಿಲವಾಗಿ, ಕುಟುಂಬಗಳು ಒಡೆಯುತ್ತಿರುವುದು ಸರಿಯಲ್ಲ. ಸಂಸ್ಕಾರಯುತ ಶಿಕ್ಷಣದ ಕೊರತೆಯಿಂದ ಕುಟುಂಬದ ಹಾರ್ದಿಕ ಸಂಬಂಧಗಳು ವ್ಯವಹಾರವಾದರೆ ಸಮಾಜ ವ್ಯವಸ್ಥೆ ಕುಸಿಯುತ್ತದೆ.

ಸಂಸಾರವು ಯಾವ ಸಾಧನೆಗೂ ಕಡಿಮೆ ಇಲ್ಲ, ಲೋಕ ಸಂಪರ್ಕದ ಅನುಭವದಿಂದ ಜೀವದ ಪಾಕ, ಕಾವು ಇರದೆ ಪಕ್ವವಹ ಜೀವ ಇಳೆಯೊಳಗಿರದು ಎನ್ನುತ್ತಾರೆ ಡಿ.ವಿ.ಜಿ. :

**ಮನೆಯೆ ಮಠವೆಂದು ತಿಳಿ, ಬಂಧುಬಳಗವೆ ಗುರುವು**
**ಅನವರತ ಪರಿಚರ್ಯೆಯವರೊರೆವ ಪಾಠ।**
**ನಿನಗುಳಿದ ಜಗವ ಮುಟ್ಟಿಪ ಸೇತು ಸಂಸಾರ**
**ಮನಕೆ ಪುಟ ಸಂಸ್ಕಾರ ಮಂಕುತಿಮ್ಮ ॥**

ಸಂಸಾರ ಬಂಧನ ಎಂಬ ನುಡಿಗಟ್ಟು ಒಂದಿದೆ. ಜಗತ್ತಿನೊಂದಿಗೆ, ವಸ್ತುಗಳೊಂದಿಗೆ, ಬೇರೆಯವರ ಜೊತೆ ವಿಚಾರದಿಂದ ಬಂಧನವೇ ಹೊರತು ಸಂಸಾರವೇ ಬಂಧನವಲ್ಲ. ಇದೇ ರೀತಿ ಸಂಸಾರದಿಂದ ಮುಕ್ತಿಯಲ್ಲ, ವಿಚಾರದಿಂದ ಮುಕ್ತಿ ಹೊಂದುವುದು ಗುರಿ. ನಮ್ಮೊಳಗೇ ಇರುವ ಸಂಸಾರದ ಅಥವಾ ಪ್ರಪಂಚದ ಛಾಯೆಯೆ ಈ ವಿಚಾರವಾಗಿದ್ದು ಈ ವಿಚಾರದ ಕೋಟೆಯೊಳಗೇ ಸುತ್ತುವುದು ಸಂಸಾರ ಬಂಧನ. ಈ ವಿಚಾರದ ನಿರಂತರ ಪ್ರವಾಹದಿಂದ ನಮ್ಮದೇ ಆದ ಪ್ರತಿಜಗತ್ತು ನಮ್ಮ ಮನಸ್ಸಿನ ಒಳಗಡೆಯೇ ನಿರ್ಮಾಣವಾಗಿದೆ. ಇದೇ ಉತ್ತೇಜನ, ಉದ್ವಿಗ್ನತೆ, ಅಶಾಂತಿಯ ಮೂಲ; ವಿಚಾರ ತ್ಯಾಗದಿಂದಲೇ ನಾವು ನಮ್ಮೊಳಗಿನ ಪ್ರಶಾಂತ ಚೈತನ್ಯವನ್ನು ಕಾಣಬಹುದು. **'ಚಿತ್ತಸಂಸ್ಕಾರ ಸಾಧನವಯ್ಯ ಸಂಸಾರ ತತ್ವ ಪ್ರವೃತ್ತರಿಗೆ'** ಎನ್ನುತ್ತಾನೆ ಮಂಕುತಿಮ್ಮ. ಮೋಕ್ಷಸಾಧನೆಯಲ್ಲಿ ಗೃಹಸ್ಥನು ಯಶಸ್ವಿಯಾಗಬಲ್ಲನೆ? ಎಂದು ರಮಣ ಮಹರ್ಷಿಗಳನ್ನು ಕೇಳಿದಾಗ ಅವರು ಉತ್ತರಿಸಿದ್ದು ಹೀಗೆ: ''ನಿನ್ನನ್ನು ನೀನು ಗೃಹಸ್ಥ ಎಂದೇಕೆ ತಿಳಿಯುವೆ? ಸಂನ್ಯಾಸಿಯಾಗಿ ಹೊರಟಾಗಲೂ ನಾನು ಸಂನ್ಯಾಸಿ ಎಂಬ ಆಲೋಚನೆ ಬೆನ್ನಟ್ಟುತ್ತದೆ. ಈ ಅಹಂಭಾವವೇ ಆಲೋಚನೆಗಳ ಮೂಲ. ಅದೇ ದೇಹವನ್ನೂ ಪ್ರಪಂಚವನ್ನೂ ಸೃಷ್ಟಿಮಾಡಿ, ನಿಮ್ಮನ್ನು ನೀವು ಗೃಹಸ್ಥನೆಂದು ಗುರುತಿಸಿಕೊಳ್ಳುವಂತೆ ಮಾಡುತ್ತವೆ. ಮಾನಸಿಕ ಬಂಧಗಳು ಎಲ್ಲಿದ್ದರೂ ಇರುತ್ತವೆ. ಸ್ಥಳವನ್ನು ಬದಲಾಯಿಸಿದರೆ ಅವು ಬದಲಾಗವು. ನಿಜವಾಗಿ ದಾಟಬೇಕಾಗಿರುವುದು ಮನಸ್ಸನ್ನು. ಅದನ್ನು ಅರಣ್ಯದಲ್ಲಿದ್ದುಕೊಂಡು ಸಾಧಿಸಬಲ್ಲಿರಾದರೆ, ಖಂಡಿತವಾಗಿ ಮನೆಯಲ್ಲೂ ಅದನ್ನು ಸಾಧಿಸಬಲ್ಲಿರಿ. ಎಂತಹ ಪರಿಸರದಲ್ಲೂ ಸಾಧಕರು ತಮ್ಮ ಸಹಜ ಸ್ಥಿತಿಯಾದ ಸಮಾಧಿಯಲ್ಲಿ ಯಾವಾಗಲೂ ಇರಬೇಕು. ಶಂಕರಾಚಾರ್ಯರು ವಿವೇಕ ಚೂಡಾಮಣಿಯಲ್ಲಿ ಹೇಳುವ 'ನಾಹಂ ಚಿಂತಾ', 'ಕೋಽಹಂ, ಸೋಽಹಂ' ಎಂಬ ಚಿಂತನೆ ನಮಗೆ ಸಾಧ್ಯವಾಗಬೇಕು.''

**ಬಂಧನವದೇನಲ್ಲ ಜೀವಜೀವ ಪ್ರೇಮ**
**ಒಂದೆ ನಿಲೆ ಜೀವವರೆ ಬೆರೆತರಲೆ ಪೂರ್ಣ।**
**ದುಂದುಗವನ್ ಅರೆಗೆಯ್ದು ಸಂತಸವನಿಮ್ಮಡಿಪ**
**ಬಾಂಧವ್ಯ ದೈವಕೃಪೆ ಮಂಕುತಿಮ್ಮ ॥**

ಭಾರತೀಯ ಸಂಪ್ರದಾಯದಲ್ಲಿ ಜೀವನದಲ್ಲಿ ಗೃಹಸ್ಥಾಶ್ರಮದ ಮುಂದಿನ ಘಟ್ಟಗಳು ಎರಡು: ಮಕ್ಕಳಿಗೆ ಎಲ್ಲ ಜವಾಬ್ದಾರಿ ವಹಿಸಿ, ಕಾಡಿಗೆ ಹೋಗಿ ಗುಡಿಸಿಲಿನಲ್ಲಿ ಸರಳವಾಗಿ ಜೀವಿಸುವುದು ವಾನಪ್ರಸ್ಥ. ಎಲ್ಲ ಭೋಗದ ಇಚ್ಛೆಗಳನ್ನು ಬಿಟ್ಟು ಮೋಕ್ಷಕ್ಕಾಗಿ ಸಾಧನೆ ಮಾಡುವುದು ಸಂನ್ಯಾಸ. ಗುರುಗಳಿಂದ ಒಂದು ಪರಂಪರೆಯ ದೀಕ್ಷೆ ಪಡೆದು ಅದಕ್ಕೆ ಅನುಗುಣವಾಗಿ ಆಚರಣೆಗಳನ್ನು ನಡೆಸುವವರು ಸಂನ್ಯಾಸಿಗಳು. ಕೇಶಮುಂಡನ, ಪೂರ್ವಜರಿಗೆ ತರ್ಪಣ, ಆತ್ಮಶ್ರಾದ್ಧ, ಹೋಮಗಳ ಅನಂತರ ವಸ್ತ್ರಗಳನ್ನೂ ತ್ಯಜಿಸಿ ಉತ್ತರದಿಕ್ಕಿಗೆ ನಡೆಯುವಾಗ ಗುರುಗಳು ನಿಲ್ಲಿಸಿ, ಆ ಕ್ಷಣಕ್ಕೆ ಹೊಳೆದ ಹೊಸ ಹೆಸರನ್ನು, ಕಾವಿ ಬಟ್ಟೆಯನ್ನು ಇತ್ತು ದೀಕ್ಷೆ ನೀಡುತ್ತಾರೆ. ಕುಟುಂಬದ ಜೊತೆ ಸಂಬಂಧ ಇಟ್ಟುಕೊಳ್ಳದೆ ಇರುವ ಈ ಸಂನ್ಯಾಸಿಗಳಲ್ಲಿ ಇತರ ಸಂನ್ಯಾಸಿಗಳೊಡನೆ ಮಠಗಳಲ್ಲಿ ಜೀವಿಸುವವರು ಹಾಗೂ ಅಲೆಮಾರಿಗಳಾಗಿ ತಿರುಗುತ್ತಿರುವವರು ಎಂದು ಎರಡು ವಿಧ. ಶ್ರೀರಾಮಕೃಷ್ಣ ಪರಮಹಂಸರು ಕುಟೀಚಕ, ಬಹೂದಕ ಎಂದು ಇವರನ್ನು ಕರೆಯುತ್ತಾರೆ. ಅಲ್ಲದೆ, ಶಿವನೇ ಗುರುವೆಂದು ಯಾರಿಂದಲೂ ದೀಕ್ಷೆ ಪಡೆಯದೆ ಅವಧೂತರಾಗಿ ಕಾವಿ ಧರಿಸುವವರೂ ಕೆಲವರು ಇದ್ದಾರೆ. ಯಾರೊಂದಿಗೂ ಸ್ಪರ್ಧಿಸದಿರುವುದು, ಅಹಿಂಸೆ, ಆವಶ್ಯಕತೆಗಿಂತ ಹೆಚ್ಚು ಬೇಡದೆ, ಸಂಗ್ರಹ ಮಾಡದೆ ಇರುವುದು ಸಂನ್ಯಾಸಿಗಳ ಮೂಲಭೂತ ಲಕ್ಷಣ. ಆತ್ಮನೂ ಬ್ರಹ್ಮನೂ ಒಂದೇ ಎಂಬ ಜ್ಞಾನವನ್ನು ಪಡೆಯುವುದೇ ಈ ಎಲ್ಲರ ಗುರಿ, ಸಾಧನೆ. ಕರ್ತವ್ಯಗಳಿರುವುದು ಆತ್ಮಜ್ಞಾನಕ್ಕಾಗಿಯೆ ವಿನಾ ಸ್ವಂತ ಲಾಭ, ಭೌತಿಕ ಸುಖದ ಅಪೇಕ್ಷೆಗಾಗಿ ಅಲ್ಲ ಎಂದು ಅರಿತರೆ ಆತ ಸಂನ್ಯಾಸಿ. ತ್ಯಾಗ ಎಂದರೆ ಕರ್ಮತ್ಯಾಗವಲ್ಲ ಎಂಬುದು ತಾತ್ಪರ್ಯ. ಯಾವ ಅಧಿಕಾರ ಸ್ಥಾನವನ್ನೂ ಒಲ್ಲದ ಮಹಾನ್ ರಾಜಕಾರಣಿ ಮಹಾತ್ಮಾ ಗಾಂಧಿಯನ್ನು ಸಂನ್ಯಾಸಿ ಎನ್ನಬಹುದಲ್ಲವೆ?

ಸಂನ್ಯಾಸಿ ಪರಂಪರೆಯ ಕುರುಹುಗಳು ಹರಪ್ಪ ನಾಗರಿಕತೆಯಲ್ಲೂ ಇವೆ. ಈ ಪರಂಪರೆಯಲ್ಲಿ ಮೂರು ವಿಧ: ಶಂಕರಾಚಾರ್ಯರಿಂದ ಸ್ಥಾಪಿತವಾದ ದಶನಾಮಿ (ಗಿರಿ, ಪುರಿ, ಭಾರತಿ, ವನ, ಪರ್ವತ, ಅರಣ್ಯ, ಸಾಗರ, ತೀರ್ಥ, ಆಶ್ರಮ ಮತ್ತು ಸರಸ್ವತಿ) ಪಂಥದ ಶೈವರು, ಶ್ರೀ ರಾಮಾನುಜ ಆಚಾರ್ಯರಿಂದ (ಕ್ರಿ.ಶ.೧೦೦೦) ಆರಂಭವಾದ ವೈಷ್ಣವರು, ಪುರಾತನ ಸಂಪ್ರದಾಯದ ಶಾಕ್ತರು. ಶೈವ, ವೈಷ್ಣವ ಸಂನ್ಯಾಸಿಗಳಲ್ಲಿ ಸಾಧುಗಳನ್ನು ರಕ್ಷಿಸುವ, ಆಕ್ರಮಣಶೀಲ ನಾಗಾ ಸಾಧುಗಳ ಗುಂಪು ಇದೆ. ಒಮ್ಮೆ ಸಂನ್ಯಾಸಿಯಾದ ಬಳಿಕ ಲೌಕಿಕ ಗೃಹಸ್ಥ ಜೀವನಕ್ಕೆ ಮರಳುವ ಅವಕಾಶ ಇಲ್ಲ. ಸ್ವಾಮಿ ರಾಮಾನಂದರಿಂದ ಸ್ತ್ರೀಯರಿಗೆ, ಕೆಳವರ್ಗದವರಿಗೆ ದೀಕ್ಷೆ ನೀಡುವ ಪದ್ಧತಿ ಆರಂಭವಾಯಿತು. ರಾಮಾನಂದಿ ಪಂಥದ ಸಂನ್ಯಾಸಿಗಳಲ್ಲಿ ತುಲಸೀದಾಸರು, ಕಬೀರರು ಪ್ರಮುಖರು.

ಡಿ.ವಿ.ಜಿ.ಯವರು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ ಸಂನ್ಯಾಸಾಶ್ರಮವನ್ನು ಕುರಿತು ಹೀಗೆಂದಿದ್ದಾರೆ:

**ಕಾಷಾಯವೇಂ ತಪಸು? ಗೃಹಲೋಕನಿರ್ವಾಹ**
**ವೇಷತಾಳದ ತಪಸು, ಕಠಿನತರ ತಪಸು ।**
**ಲೇಸಿನಿಂದದು ಸಾಗೆ ಬೇಕು ಶಮ ದಮ ಸಮತೆ**
**ಅಸಿಧಾರಾವ್ರತವೊ ಮಂಕುತಿಮ್ಮ ॥**

ಭಾರತೀಯರಲ್ಲಿ ಜೀವನವೇ ಒಂದು ಸಾಧನೆಯಾಗಿದ್ದು, ಆಶ್ರಮದಿಂದ ಆಶ್ರಮಕ್ಕೆ ಹಿಂದಿನ ಹಂತದ ಸಾಧನಾ ಕರ್ಮಗಳ ಜೊತೆಗೆ ಹೊಸತು ಬಂದು ಸೇರುತ್ತದೆ. ವ್ಯಕ್ತಿತ್ವ ವಿಕಸನ ಅಥವಾ ಆತ್ಮೋನ್ನತಿಯ ಹಂತಗಳು ಈ ಆಶ್ರಮಗಳು. ಬ್ರಹ್ಮಚರ್ಯ ಹಂತದ ಕಲಿಕೆಯನ್ನು ಮರೆಯದೆ ಗೃಹಸ್ಥನು ಸುಖಪಡುವ, ಜವಾಬ್ದಾರಿ ನಿರ್ವಹಿಸುವ. ಇಲ್ಲಿ ಕಲಿಕೆಯ ಜೊತೆಗೆ ಧರ್ಮ ದಿಂದ ಸಂಸಾರ ಸಾಕುವ, ದೇವ-ಪಿತೃ-ಋಷಿ ಋಣಗಳನ್ನು ತೀರಿಸುವ ನಿಯತ ಕರ್ಮಗಳ, ಕರ್ತವ್ಯಗಳ ಜವಾಬ್ದಾರಿಯೂ ಅವನಿಗೆ ಸೇರಿತು. ಕರ್ಮಗಳಿಂದ ಜ್ಞಾನ ಹೊಂದಲು ಬೇಕಾದ ಶಾಂತಿ, ಚಿತ್ತಶುದ್ಧಿ ಬರುತ್ತದೆ. ಕರ್ಮದಿಂದ ಲೋಕ ಸಂಪರ್ಕದ ಸಂಸ್ಕಾರ. ಇದರಿಂದ ಚಿತ್ತ ಶುದ್ಧಿ, ಭ್ರಾಂತಿ ನಿವಾರಣೆ. ಸಮಾಜ, ಹೆಚ್ಚೇಕೆ ರಾಜ್ಯ ಎಂಬುದೂ ವಿಸ್ತೃತ ಕುಟುಂಬವೇ. ಗೃಹಸ್ಥನ ಸಂಬಂಧಗಳು ವಿಸ್ತಾರ, ಸಮಸ್ಯೆಗಳು ಅನೇಕ. ನಿತ್ಯ, ನೈಮಿತ್ತಿಕ, ಐಚ್ಛಿಕ ಕರ್ಮಗಳಿಂದ, ಸಂಸ್ಕಾರಗಳಿಂದ ಆತ ಮನಃಪ್ರಸಾದವನ್ನು ಗಳಿಸುತ್ತಾನೆ. ಗೃಹಸ್ಥಧರ್ಮದ ಯಜ್ಞಹೋಮಗಳನ್ನೂ, ದಾನ ಧರ್ಮಗಳನ್ನೂ ಸಂನ್ಯಾಸಿ ಬಿಡಬೇಕಾಗಿಲ್ಲ. ಅವನ್ನು ಸ್ವಪ್ರಯೋಜನ ಸಂಕಲ್ಪ ಇಲ್ಲದೆ ಮಾಡಬೇಕು *(ಗೀತಾ ೬-೧)*. ಸಂನ್ಯಾಸಿಗೆ ಲೋಕಹಿತದ ಸಂಕಲ್ಪ ಬೇಕು; ಸ್ವಾರ್ಥ ಸಂಕಲ್ಪ ಬೇಡ. ಆತನೂ ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ದಾನ, ಧರ್ಮ, ದಯೆ, ಶಾಂತಿಗಳ ಸಾಧಾರಣ ಧರ್ಮವನ್ನು ಪಾಲಿಸಬೇಕು.

ಎಲ್ಲ ಆಶ್ರಮಗಳಿಗೂ ಕಾಲ ನಿಗದಿ ಮಾಡಿದ್ದಾರೆ. ಅಧ್ಯಯನ ೨೦-೨೨ ವರ್ಷಗಳವರೆಗೆ. ವೈವಾಹಿಕ ಜೀವನ ವಾರ್ಧಕ್ಯದ ವರೆಗೆ. ಅನಂತರ ೬೦-೭೦ ವರ್ಷಗಳಾದ ಬಳಿಕ ವಾನಪ್ರಸ್ಥದಲ್ಲಿ ನಿಧಾನಕ್ಕೆ ಜವಾಬ್ದಾರಿಗಳ ವರ್ಗಾವಣೆ, ವೈವಾಹಿಕ ಬದುಕಿನಿಂದ ದೂರಾಗುವುದು. ಸಮಾಜದ ಹಿತಚಿಂತನೆ, ಸಹಾಯ ಮೊದಲಾದವು ವಾನಪ್ರಸ್ಥರ ಕರ್ತವ್ಯ. ಮಹಾಭಾರತದಲ್ಲಿ ವಿದುರ ನೀತಿ ಮೊದಲಾದ ನೀತಿಗಳನ್ನು ಕೊಡುವುದು ವಾನಪ್ರಸ್ಥರು ಎಂಬುದನ್ನು ಗಮನಿಸಿ. ಕೊನೆಯಲ್ಲಿ ೭೫-೮೦ ವರ್ಷ ವಯಸ್ಸಾದ ಬಳಿಕ ಸಮಾಜದಿಂದಲೂ ದೂರಾಗುವ ವೈರಾಗ್ಯ ಮೂಡಿದ ಮೇಲೆ ಸಂನ್ಯಾಸ. ಬದುಕಿನ ನಶ್ವರತೆಯಿಂದಲೋ, ಪೂರ್ವ ಜನ್ಮದ ಸಂಸ್ಕಾರದಿಂದಲೋ ಅಂತಹ ವೈರಾಗ್ಯ ಬೇಗನೆ ಬಂದಲ್ಲಿ, ಬ್ರಹ್ಮಚಾರಿತ್ವದಿಂದ ನೇರ ಸಂನ್ಯಾಸಕ್ಕೂ ಎಡೆ ಉಂಟು.

ಜೀವನ ನಶ್ವರ, ಬದುಕೇ ಅರ್ಥಹೀನ ಎನ್ನುವ ವಿಚಾರ, ಎಲ್ಲದರಲ್ಲೂ ನಿರಾಸಕ್ತಿ. ಇದಕ್ಕೆಲ್ಲ ಏನು ಅರ್ಥ? ಮನಸ್ಸಿಗೆ ಶಾಂತಿ ಎಲ್ಲಿ ಸಿಕ್ಕೀತು? ಎನ್ನುವ ಪ್ರಶ್ನೆಗಳು ವೈರಾಗ್ಯದ ಕುರುಹು. ಈ ಪ್ರಶ್ನೆಗಳು, ನಿರಾಸಕ್ತಿ ತಾತ್ಕಾಲಿಕವೂ ಆಗಿರಬಹುದು. ನಮ್ಮ ಸಂಪ್ರದಾಯದಲ್ಲಿ ಇಂತಹ ವೈರಾಗ್ಯಕ್ಕೆ ಸ್ಮಶಾನ ವೈರಾಗ್ಯ, ಅಭಾವ ವೈರಾಗ್ಯ, ಪ್ರಸೂತಿ ವೈರಾಗ್ಯ ಮೊದಲಾದ ಪದಗಳು ಇವೆ. ಬದುಕಿನ ವೇಗಕ್ಕೆ ಹೊಂದಿಕೊಳ್ಳದ ಎಳೆಯರು ಈಚೆಗೆ ಸಣ್ಣ ಕಾರಣಕ್ಕೇ ಆತ್ಮಹತ್ಯೆ ಮಾಡಿಕೊಳ್ಳುವುದು, ಎಲ್ಲವನ್ನೂ ಬದಿಗೆ ಸರಿಸಿ ಎದ್ದುಹೋಗುವುದು ಸಾಮಾನ್ಯವಾಗಿದೆ. ಇದು ವೈರಾಗ್ಯದ ಅನುಕರಣೆ. ಪಕ್ವವಾದ ಹಣ್ಣು ತೊಟ್ಟಿನಿಂದ ಕಳಚಿಕೊಳ್ಳುವಂತೆ, ಎಲ್ಲದರ ಮಧ್ಯೆ ಇದ್ದೂ ಅಂಟಿಕೊಳ್ಳದ, ಪರಿವರ್ತಿತ ಜೀವನ ದೃಷ್ಟಿ, ಶಾಂತಿ, ನೆಮ್ಮದಿಯ ಸ್ಥಿತಿಯಾದ ಸಂನ್ಯಾಸ ಆಶ್ರಮ ಇದಕ್ಕಿಂತ ಬೇರೆ. ಇಲ್ಲಿ ಜೀವನದ ತಿರಸ್ಕಾರವಿಲ್ಲ, ಜೀವಿಸುವುದರಲ್ಲಿ ಹೊಸ ಕಾಣ್ಕೆಯ ಉತ್ಕಟತೆ ಇದೆ.

ಪುರುಷಾರ್ಥಗಳಲ್ಲಿ ಮೊದಲ ಮೂರು ಗೃಹಸ್ಥರು ಸಾಧಿಸಬೇಕಾದ ಧರ್ಮ, ಅರ್ಥ, ಕಾಮಗಳು. ಮೋಕ್ಷವೆಂಬ ನಾಲ್ಕನೆಯ ಪುರುಷಾರ್ಥವನ್ನು ಸಂನ್ಯಾಸ ಎಂಬ ನಾಲ್ಕನೆಯ ಆಶ್ರಮಕ್ಕಾಗಿ ಉಪನಿಷತ್ತುಗಳಲ್ಲಿ ಸೇರಿಸಲಾಯಿತೇನೋ. ಬ್ರಹ್ಮಜ್ಞಾನ ಪಡೆದ ಮೇಲೆ ಪುನರ್ಜನ್ಮವಿಲ್ಲ. ಜನಕ, ರೈಕ್ವ ಮೊದಲಾದವರು ಗೃಹಸ್ಥರಾಗಿದ್ದೇ ಮೋಕ್ಷ ಪಡೆದರು. ಸಾಂಪ್ರದಾಯಿಕವಾಗಿ ಹೆಂಡತಿಯ ಅನುಮತಿ ಪಡೆದು ಸಂನ್ಯಾಸ ಪಡೆಯಬೇಕಿತ್ತು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ ಹೀಗೆ ಮಾಡುತ್ತಾನೆ. ಬುದ್ಧನ ಕಾಲದಲ್ಲಿ ಬಾಲ ಸಂನ್ಯಾಸ ರೂಢಿಗೆ ಬಂತು. ಕೆಲವು ಮಾಧ್ವ ಹಾಗೂ ಶ್ರೀವೈಷ್ಣವ ಮಠಗಳಲ್ಲಿ ಗೃಹಸ್ಥರೇ ಸಂನ್ಯಾಸಿಗಳಾಗಿ ಪೀಠಾಧಿಪತಿಗಳಾಗುತ್ತಾರೆ. ಸಂಸಾರಿಯಾಗಿದ್ದು, ಸಂನ್ಯಾಸಿಯಾಗಿ ತಾವೇ ಮಠ ಕಟ್ಟಿದ ಉದಾಹರಣೆಗಳೂ ಇವೆ.

**ಸಾಧನ ಮಾರ್ಗ:** ಇತರರ ಮೇಲೆ ದೋಷಾರೋಪಣೆ ಮಾಡುವುದನ್ನು ಬಿಟ್ಟು, ಸ್ವಂತ ಜವಾಬ್ದಾರಿಯಿಂದ ಸಾಧನೆ ಮಾಡಬೇಕು. ತನ್ನ ಉದ್ಧಾರ ತನ್ನ ಕೈಯಲ್ಲಿದೆ ಎಂಬುದನ್ನು ಅರಿಯಬೇಕು. ಸತ್ಯಪಾಲನೆ, ಇಂದ್ರಿಯನಿಗ್ರಹ, ಮೌನ ಅಗತ್ಯ; ಸಂಶಯ-ವಿಪರ್ಯಯಗಳಿಗೆ ಅವಕಾಶವಾಗುವಂತೆ ಹೆಚ್ಚು ತರ್ಕ ಮಾಡದೆ, ವೃಥಾ ಕಾಲಹರಣ ಮಾಡದೆ, ಮೈಮರೆಯದೆ ಶ್ರದ್ಧೆಯಿಂದ ಅಂತರಂಗ ಶೋಧನೆ ನಡೆಸಬೇಕು. ಸಾಂಪ್ರದಾಯಿಕವಾದ ಸಾಧನೆಯ ಮಾರ್ಗಗಳಿವು: **೧) ಕರ್ಮಯೋಗ:** ಪ್ರತಿ ಜೀವಿಯೂ ಹುಟ್ಟಿದಂದಿನಿಂದ ಸಾಯುವವರೆಗೆ ಕರ್ಮ ಮಾಡಲೇ ಬೇಕು. ಲೋಕಕ್ಕೆ ಕಟ್ಟಿಹಾಕದಂತೆ, ಆದರೆ ಜಗತ್ತಿನ ಹಿತಕ್ಕಾಗಿ ನಿಷ್ಕಾಮ ಕರ್ಮ ಅಥವಾ ಫಲವನ್ನು ದೇವರಿಗೆ ಅರ್ಪಿಸುವ ರೀತಿಯಲ್ಲಿ ಮಾಡುವುದು ಸಾಧನೆ ಅಥವಾ ಯೋಗ. ಹಿಂದೆ ಹೇಳಿದಂತೆ ದೇವ-ಪಿತೃ-ಋಷಿ ಋಣಗಳನ್ನು ತೀರಿಸಲು ಕೃತಜ್ಞತೆಯಿಂದ ಮಾಡುವ ಕರ್ಮಗಳು ದೇವ-ಪಿತೃ-ಋಷಿ ಯಜ್ಞಗಳು. ಇವಲ್ಲದೆ ಸಹ ಮಾನವರ ಹಾಗೂ ಜೀವಿಗಳ ಕಷ್ಟ ಸುಖಗಳಲ್ಲಿ ಪಾಲ್ಗೊಳ್ಳುವ ನೃ ಯಜ್ಞ, ಭೂತ ಯಜ್ಞಗಳು ಎಲ್ಲವನ್ನೂ ಹಂಚಿ ತಿನ್ನಬೇಕು, ಸ್ವಾರ್ಥ ಕೂಡದು ಎಂಬ ದೃಷ್ಟಿಯನ್ನು ಹೊಂದಿವೆ. **೨) ಜ್ಞಾನಯೋಗ:** ಸೃಷ್ಟಿಯ ಕಾರಣ; ಪರಬ್ರಹ್ಮನ ಅಂಶವಾದ ಇದರಲ್ಲಿನ ತ್ರಿಗುಣಗಳು ಆ ಮೂಲಕ ವಿಕಾಸ, ಎಲ್ಲ ಜೀವಿಗಳ ಒಳಗಿನ ಚೈತನ್ಯ ಪರಮಾತ್ಮನೆ ಎಂಬ ತಾತ್ತ್ವಿಕ ಅಂಶಗಳನ್ನು ಧ್ಯಾನಿಸುತ್ತಾ ಚಿತ್ತ ಶುದ್ಧಿ, ಸಂಯಮಗಳನ್ನು ಗಳಿಸಿ,

ಎಲ್ಲವೂ ಬ್ರಹ್ಮನೆಂಬ ಅನುಭವವನ್ನು ಪಡೆದುಕೊಳ್ಳುವುದು. ಶಮ ದಮಗಳನ್ನು ಅಭ್ಯಸಿಸಿ, ವಿಷಯಾಸಕ್ತವಾದ ಇಂದ್ರಿಯಗಳಿಂದ ಮನಸ್ಸನ್ನು ಹಿಂದಕ್ಕೆ ಎಳೆದುಕೊಂಡು ಆತ್ಮದಲ್ಲಿ ನೆಲೆನಿಲ್ಲಿಸಿ, ಚಿತ್ತವನ್ನು ಸ್ಥಿರಗೊಳಿಸಿ ಧ್ಯಾನದ ಅಭ್ಯಾಸ ಮಾಡುವುದು



ರಾಜಯೋಗ. ಇದರ ಗುರಿ ಆತ್ಮನನ್ನು ಪರಮಾತ್ಮನಲ್ಲಿ ಲೀನಗೊಳಿಸುವುದು. ಈ ಜನ್ಮದಲ್ಲಿ ಸಾಧ್ಯವಾಗದಿದ್ದರೆ ಇನ್ನೊಂದು ಜನ್ಮದಲ್ಲಿ ನಿಂತಲ್ಲಿಂದ ಪ್ರಾರಂಭಿಸಬಹುದು. **೩) ಭಕ್ತಿಯೋಗ:** ಪ್ರತಿಯೊಂದು ಜೀವಿಗೂ ಅದು ಇಷ್ಟಪಡುವ ರೂಪ, ಭಾವದಲ್ಲೇ ತಾನು ಒಲಿಯುವೆನು ಎಂಬ ಆಧ್ಯಾತ್ಮಿಕ ಔದಾರ್ಯವನ್ನು, ಸ್ವಾತಂತ್ರ್ಯವನ್ನು ಭಗವಂತನು ನೀಡಿದ್ದಾನೆ. ಅವನಲ್ಲಿ ಪ್ರೀತಿ, ಭಕ್ತಿಯ ಪಾರಮ್ಯವನ್ನು ಭಕ್ತ ಸಾಧಿಸಬೇಕು. ಕಷ್ಟಪರಿಹಾರಕ್ಕಾಗಿ ಮೊರೆಹೋಗುವ ಆರ್ತ, ಭಗವಂತನ ಲೀಲೆಯನ್ನು ಆನಂದಿಸುವ ಜಿಜ್ಞಾಸು, ಪ್ರಯೋಜನಕ್ಕಾಗಿ ಆಶ್ರಯಿಸುವ ಅರ್ಥಾರ್ಥಿ ಇವರೆಲ್ಲರೂ ಭಕ್ತರೇ ಆದರೂ ಕರ್ಮಫಲತ್ಯಾಗಿಯಾಗಿ, ಮನಸ್ಸು ಬುದ್ಧಿ ಇಂದ್ರಿಯಗಳನ್ನು ಪರಮಾತ್ಮನಲ್ಲಿ ನೆಲೆಯಾಗಿಸಿ, ಅವನಿಗೆ ಪ್ರೀತಿಯಾಗುವಂತೆ ಜೀವನ ನಡೆಸುವ ಜ್ಞಾನಿ ಭಕ್ತನು ಸ್ವತಃ ಭಗವಂತನೇ ಎನ್ನುತ್ತಾನೆ ಕೃಷ್ಣ. ಶ್ರವಣ, ಕೀರ್ತನ, ಸ್ಮರಣ, ಪಾದಸೇವನೆ, ಅರ್ಚನೆ, ವಂದನೆ, ದಾಸ್ಯ, ಸಖ್ಯ, ಆತ್ಮನಿವೇದನೆ ಭಕ್ತಿಯ ನವವಿಧಗಳು. ಸಾಧನೆಯನ್ನು ಸ್ವಲ್ಪ ಮಾಡಿದರೂ ಮಹಾ ಭಯದಿಂದ, ಭವದಿಂದ ಪಾರುಮಾಡುವುದು. ಕಲಿಯುಗಕ್ಕೆ ನಾರದೀಯ ಭಕ್ತಿಯೇ ಮಾರ್ಗ ಎನ್ನುವ ಶ್ರೀರಾಮಕೃಷ್ಣರು ಕೀರ್ತನೆ, ಸತ್ಸಂಗ, ಏಕಾಂತ ಧ್ಯಾನ, ಸದಾ ಸದ್ವಿಚಾರ ಮಾಡುವುದರಿಂದ ಮನಸ್ಸನ್ನು ದೇವರ ಕಡೆಗೆ ಹರಿಸಬಹುದು; ಪ್ರೀತಿ, ವ್ಯಾಕುಲತೆಗಳಿಂದ ಭಗವಂತನನ್ನು ಪಡೆಯಬಹುದು ಎನ್ನುತ್ತಾರೆ.

ಶ್ರೀಕೃಷ್ಣನು ಸಂನ್ಯಾಸಿ ಮತ್ತು ಯೋಗಿ ಒಂದೇ ಎನ್ನುತ್ತಾನೆ. ಅಹಂಕಾರ ಇಲ್ಲದಿರುವುದು, ಕರ್ಮಫಲದಲ್ಲಿ ಅನಾಸಕ್ತಿ, ಇತರರ ಯೋಗಕ್ಷೇಮದಲ್ಲಿ ಆಸಕ್ತಿ ಮುಖ್ಯ ಲಕ್ಷಣ. ಯೋಗಿಯಾದ ಬಳಿಕ ಸಂಕಲ್ಪ ತ್ಯಾಗ, ಕರ್ಮತ್ಯಾಗ ಸಂಭವಿಸುವುದು. ಹಣ ಮೊದಲಾದ ಬಾಹ್ಯವಸ್ತುಗಳನ್ನು ಆಂತರಿಕವಾಗಿಯೂ ತ್ಯಾಗ ಮಾಡುವುದು, ಕೀರ್ತಿ, ಸ್ಥಾನ ಮಾನಗಳ ವ್ಯಾಮೋಹ ಬಿಡುವುದು, ಮತ, ಅಭಿಪ್ರಾಯಗಳ ಬಗೆಗಿನ ಅಹಂಕಾರ ಜನ್ಯ ಒಲವು ಇಲ್ಲದಿರುವುದು, ವಾಸನಾತ್ರಯಗಳಿಂದ ಮುಕ್ತಿ, ಶಮ ದಮ ಉಪರತಿ ತಿತಿಕ್ಷೆ ಶ್ರದ್ಧೆ ಸಮಾಧಾನ, ಮೋಕ್ಷೇಚ್ಛೆ ಇವು ವೈರಾಗ್ಯದ ಲಕ್ಷಣಗಳು. ವಾಸನಾತ್ರಯಗಳು (ದೇಹವಾಸನೆ, ಲೋಕವಾಸನೆ, ಶಾಸ್ತ್ರವಾಸನೆ) ನೆಲೆಸಿರುವುದು ಮೂರು ಗುಣಗಳ ಮನಸ್ಸಿನಲ್ಲಿ; ಆದ್ದರಿಂದ ಮನೋನಿಗ್ರಹ ಅಥವಾ ಚಿತ್ತವೃತ್ತಿ ನಿರೋಧ ಅಗತ್ಯ. ಇದು ಸಾಧನೆಯಿಂದ ಮಾತ್ರ ಸಾಧ್ಯ. ಸಾಧನೆಯಿಂದ ಜೀವಿಸಿರುವಾಗಲೇ ಮುಕ್ತಿಯನ್ನು ಪಡೆಯುವುದು ಸ್ವರೂಪ ಸಿದ್ಧಿ. ಇದರಿಂದ ತತ್ತ್ವಜ್ಞಾನ ರಕ್ಷೆ, ದೇವತ್ವವನ್ನು ಪಡೆಯುವ ತಪಸ್ಸು, ಯಾರೊಡನೆಯೂ ವಾದಕ್ಕಿಳಿಯದ ಶಾಂತಿ, ದುಃಖನಾಶ ಮತ್ತು ಸುಖದ ಅಭಿವ್ಯಕ್ತಿ ಲಭ್ಯವಾಗುತ್ತದೆ. ಶ್ರೀಕೃಷ್ಣನು ಈ ಸ್ಥಿತಿಯನ್ನು, 'ಗಾಳಿಯಿಲ್ಲದ ಕಡೆ ಇರುವ ದೀಪ ಚಲಿಸದೆ ಇರುವಂತೆ ಆತ್ಮಯೋಗಿಯ ಚಿತ್ತವು ನಿಶ್ಚಲವಾಗಿರುವುದು' ಎನ್ನುತ್ತಾನೆ. ಧ್ಯಾನದಿಂದ ಮೆಲ್ಲಗೆ ಹಿಂತಿರುಗುವುದು, ಮನಸ್ಸನ್ನು ಆತ್ಮನಲ್ಲಿ ನಿಲ್ಲಿಸಿ ಏನನ್ನೂ ಚಿಂತಿಸದಿರುವುದು; ವಿಷಯದಿಂದ ಹೊರಬರುವ ಮನಸ್ಸನ್ನು ಅಲ್ಲಲ್ಲಿಯೇ ನಿಗ್ರಹಿಸಿ ಆತ್ಮನ ವಶಕ್ಕೆ ಕೊಂಡೊಯ್ಯುವುದು ಧ್ಯಾನಮಾರ್ಗ. ಚಂಚಲ ಮನಸ್ಸಿನವರಿಗೆ ಇದು ಸುಲಭವಲ್ಲ, ಅಭ್ಯಾಸ ಮತ್ತು ವೈರಾಗ್ಯದಿಂದ ಪ್ರಯತ್ನಿಸಬೇಕು ಎಂದು ಅಭ್ಯಾಸಯೋಗವನ್ನು ತಿಳಿಸುತ್ತಾನೆ.

ಬಹಿರಂಗದ ಜೀವನದಲ್ಲಿ ಕಾರ್ಯದಕ್ಷತೆ, ಮನಸ್ಸಮಾಧಾನ ಮುಖ್ಯ. ಯುಕ್ತ ಆಹಾರವಿಹಾರ, ಕರ್ಮ, ನಿದ್ರೆ ಇರಬೇಕು. ಮನಸ್ಸನ್ನು ಹದಗೊಳಿಸುವ ಧ್ಯಾನವನ್ನು ಗುರುವಿನಿಂದ ಕಲಿಯಬೇಕು. ಏಕಾಂತ ಧ್ಯಾನಕ್ಕೆ ಸ್ಥಳ, ಕಾಲ, ಮೂರ್ತಿ, ಮಂತ್ರ ಅವಶ್ಯ. ಸಮತ್ವ, ಆತ್ಮೌಪಮ್ಯ, ಸರ್ವಭೂತಹಿತ, ತದೇಕಶರಣತೆ ಯೋಗಿಯ ಲಕ್ಷಣಗಳು. ಸಾಧನೆಯು ಜೀವಪ್ರಗತಿಯ ಸೋಪಾನ ಕ್ರಮ. ಕಾಮ್ಯಕರ್ಮಗಳನ್ನು ಬಿಡುವ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವೇ ಒಳ್ಳೆಯದು ಎಂಬುದು ಶ್ರೀಕೃಷ್ಣನ ಅಭಿಪ್ರಾಯ. ಅಹಂ ಭಾವ ಇಲ್ಲದ ಕರ್ಮಫಲತ್ಯಾಗ, ಯಜ್ಞದೃಷ್ಟಿ ಸೂಕ್ತ. **ಯಜ್ಞ ದಾನತಪಃಕರ್ಮ ನ ತ್ಯಾಜ್ಯಂ** ಎನ್ನುತ್ತಾನೆ. ಸಂನ್ಯಾಸಿಯ ಕರ್ಮದಲ್ಲಿ ಇಷ್ಟ, ಅನಿಷ್ಟ, ಮಿಶ್ರ ಎಂಬುದು ಇಲ್ಲ. ಲೋಕಸಂಗ್ರಹದ ಉದ್ದೇಶದ ಇಂತಹ ಕರ್ಮವು ಮನಸ್ಸನ್ನು ಶುದ್ಧಗೊಳಿಸುವುದು. ಕರ್ಮತ್ಯಾಗ ತಾಮಸ. ಭಯ ದುಃಖಗಳಿಂದ ಕರ್ಮ ಮಾಡುವುದು ರಾಜಸ. ಆಸಕ್ತಿ, ಫಲಗಳನ್ನು ತ್ಯಜಿಸಿ ಕರ್ಮ ಮಾಡಬೇಕಾದದ್ದು ಸಾತ್ವಿಕ. ಕರ್ಮಭಾಗಿಗಳಾದ ಶರೀರ, ಉಪಾಧಿಗಳುಳ್ಳ ಕರ್ತಾ, ಇಂದ್ರಿಯಾದಿ ಉಪಕರಣಗಳು, ಯೋಜನೆ ಅಥವಾ ಕಾರ್ಯನೀತಿ, ಫಲಿತಕ್ಕೆ ಕಾರಣವಾಗುವ ದೈವ ಇವು ಐದೂ ಸೇರಿ ಕರ್ಮ ನೆರವೇರುವುದು, ಕರ್ತನೊಬ್ಬನಿಂದಲ್ಲ ಎಂಬುದನ್ನು ತಿಳಿದರೆ ನಾನೇ ಮಾಡಿದೆ ಎನ್ನುವ ಅಹಂಕಾರ ಬಾರದು. ಕರ್ಮದ ಉದ್ದೇಶವಾದ ಜ್ಞಾನವೂ ಮೂರು ವಿಧ. ವಿಭಿನ್ನವಾಗಿ ತೋರುವ ಪ್ರಪಂಚದ ವಸ್ತು ಮತ್ತು ಜೀವಿಗಳಲ್ಲಿ

ತುಡಿಯುತ್ತಿರುವ ಒಂದೇ ಸತ್ಯವನ್ನು ಕಾಣುವುದು ಸಾತ್ವಿಕ; ವಿಭಿನ್ನವಾದ ಪ್ರಾಣಿಗಳಲ್ಲಿ ಬೇರೆ ಬೇರೆ ಆತ್ಮಗಳನ್ನು ಕಾಣುವುದು ರಾಜಸ; ಒಂದೇ ಕಾರ್ಯದಲ್ಲಿ ಅದೇ ಎಲ್ಲವೂ ಎನ್ನುವಂತೆ ಪರಿಣಾಮಕ್ಕೆ ಸೀಮಿತವಾದ ಜ್ಞಾನ ತಾಮಸ. ಹೀಗೆ ನನ್ನ ಧರ್ಮವೇ, ನನ್ನ ದೇವರೇ ಉಳಿದೆಲ್ಲವುಗಳಿಗಿಂತ ಬೇರೆ, ಇದೇ ಉತ್ತಮ ಎನ್ನುವುದು ತಾಮಸ ಜ್ಞಾನ. ಭಾರತದಲ್ಲಿ ಅನೇಕ ಸ್ತರಗಳ ವೈವಿಧ್ಯತೆಯಿದ್ದರೂ ಶಾಂತಿ ಇರಲು ಸಾತ್ವಿಕ ಜ್ಞಾನ ಕಾರಣ. ಕೆಲಸಕ್ಕೆ ಅಂಟಿಕೊಳ್ಳದೆ ಅಹಂಕಾರವನ್ನು ಅವಲಂಬಿಸದೆ ಬಿಡದೆ ಸಾಧಿಸುವ ಧೃತಿ ಅಥವಾ ಸಂಕಲ್ಪ ಶಕ್ತಿ ಇದ್ದು ಉತ್ಸಾಹವೂ ಇರುವ ಕರ್ತೃ ಸಾತ್ವಿಕ; ಕೆಲಸಕ್ಕೆ ಮೋಹದಿಂದ ಅಂಟಿಕೊಂಡಿರುವವ, ದುರಾಶೆಯವ, ಸಾಧನೆಗೆ ಹಿಂಸೆ ಮಾಡಲು ಹಿಂಜರಿಯದವ, ಅಶುದ್ಧ ಮನಸ್ಸಿನವನು, ಕೆಲವೊಮ್ಮೆ ಸಂತೋಷ, ಕೆಲವೊಮ್ಮೆ ಖಿನ್ನನಾಗುವವನು ರಾಜಸಿಕ; ಅಶಿಸ್ತಿನ, ಅಸಂಸ್ಕೃತ, ಅಹಂಕಾರಿ, ಅಪ್ರಾಮಾಣಿಕ, ಹಗೆಸಾಧಕ, ಸೋಮಾರಿ, ದುಃಖಿ, ಕೆಲಸವನ್ನು ಎಳೆದು ಕಾಲಹರಣ ಮಾಡುವವ, ಕಾಲವೇ ಇಲ್ಲವೆನ್ನುವವ ತಾಮಸಿಕ. ಸಾಧಕನು ತನ್ನ ಇಚ್ಛೆ, ಆ ನಿರೀಕ್ಷಿತ ಇಚ್ಛೆಯಬಗೆಗಿನ ಜ್ಞಾನ, ಆ ಇಚ್ಛೆಯನ್ನು ಅನುಸರಿಸಿ ಮಾಡುವ ಕ್ರಿಯೆಗಳನ್ನು ಪರಿಷ್ಕರಿಸಿ ವಿಕಸಿಸುವಂತೆ ಮಾಡಬೇಕು. ತನ್ನ ಈ ಇಚ್ಛೆ ಮತ್ತು ಅದನ್ನು ಕ್ರಿಯಾರೂಪಕ್ಕೆ ತರುವ ಸಂಕಲ್ಪ ಅಥವಾ ಧೃತಿ ಇವನ್ನು ಸಾಮಾಜಿಕ ದಿಕ್ಕಿಗೆ ತಿರುಗಿಸಬೇಕು. ತನ್ನಲ್ಲಿನ ಅಪಕ್ವ ಮಾನಸಿಕ ಶಕ್ತಿಯನ್ನು ಪರಿಷ್ಕರಿಸಿ, ಶೀಲಸಂವರ್ಧನೆಯನ್ನು ಮಾಡಿಕೊಳ್ಳಬೇಕು. ಗಾಂಧೀಜಿಯವರ ಇಚ್ಛೆ, ಧೃತಿ ಅವರನ್ನು ಮಹಾತ್ಮರನ್ನಾಗಿಸಿತು. ಅನಂತ ಅನುಕಂಪ, ಕರ್ಮದಲ್ಲಿ ದಕ್ಷತೆ, ಸರಿಯಾದ ಸಾಮರ್ಥ್ಯ, ಇವುಗಳ ಜೊತೆಗೆ ಅಂತರಂಗದ ಆಧ್ಯಾತ್ಮಿಕ ದಕ್ಷತೆಯನ್ನೂ ಒಟ್ಟು ಸೇರಿಸುವ ಗೀತಾಚಾರ್ಯನ ಯೋಗ ನಮ್ಮ ಗುರಿಯಾಗಬೇಕು.

ಬುದ್ಧಿಪ್ರಕಾಶದಿಂದಂತರನುಭವಶೋಧೆ
ಸಿದ್ಧವಾ ಶೋಧೆಯಿಂ ಸತ್ಯಸಂವೀಕ್ಷೆ ।
ಶುದ್ಧಸತ್ತ್ವ ಜೀವಿತಪ್ರಶ್ನೆಗನ್ವಯಿಪ
ಪದ್ಧತಿಯೆ ಧರ್ಮವೆಲೊ- ಮಂಕುತಿಮ್ಮ ॥

ಭಾರತೀಯ ಸಂಪ್ರದಾಯದಲ್ಲಿ ಧರ್ಮ ಎಂಬುದು ಭಗವಂತನ ಜೊತೆ ಮಾಡಿಕೊಂಡ ಒಪ್ಪಂದವಲ್ಲ. ಅವನನ್ನು ನಂಬಿ, ಆತನ ಆದೇಶಗಳನ್ನು ಪಾಲಿಸಿದರೆ ಮುಕ್ತಿ ಎಂಬ ಭಾವನೆ ಇಲ್ಲ. ನಮ್ಮ ಭಗವಂತ ಸ್ವರ್ಗದಲ್ಲಿಲ್ಲ; ನಮ್ಮೊಳಗೇ ಇದ್ದಾನೆ! ನಮ್ಮ ಉದ್ಧಾರಕ್ಕೆ ನಮ್ಮ ಸಾಧನೆಯೇ ಕಾರಣವಾಗುವಂತೆಯೇ ನಮ್ಮ ಅಧಃಪತನಕ್ಕೂ ನಾವೇ ಕಾರಣ; ತಪ್ಪಿಗೆ ಪ್ರೇರಿಸುವ ಕಾಮಾದಿ ಅರಿಷಡ್ವರ್ಗಗಳು ನಮ್ಮಲ್ಲೇ ಇವೆ, ಅವನ್ನು ಗೆಲ್ಲು ಎಂಬ ಕರ್ಮ ಸಿದ್ಧಾಂತ ನಮ್ಮದು. ಲೋಕವನ್ನಲ್ಲ, ನಿನ್ನನ್ನು ನೀನು ಗೆಲ್ಲು ಎಂಬುದು ಕೃಷ್ಣನ ಉಪದೇಶ. ಜೀವನದ ಯಾವುದೇ ಘಟ್ಟದಲ್ಲಿ ಇದ್ದರೂ, ಆತ್ಮಶೋಧನೆಯೇ ನಮ್ಮನ್ನು ನಾವು ಸರಿಪಡಿಸಿಕೊಂಡು ಮುನ್ನಡೆಯುವ ಸಾಧನೆಯ ಹಾದಿ. ❋




VIDYA VIKAS

GROUP OF INSTITUTIONS, MYSURU, KARNATAKA

Established : 1991

OUR INSTITUTIONS

Vidya Vikas Institute of Engineering and Technology, Mysuru
Recognised By AICTE & Affiliated to VTU
Vidya Vikas Department of Master of Technology, (M.Tech), Mysuru
Recognised By AICTE & Affiliated to VTU
* Production Technology ( Mechanical Department)
* Computer Aided Design of Structure (Civil Department)
* Digital Electronics & Communication Systems (E&C Department)
Vidya Vikas Department of Master of Business Administration (MBA) Mysuru
Recognised By AICTE & Affiliated to VTU
Vidya Vikas Department of Master of Computr Applications (MCA), Mysuru
Recognised By AICTE & Affiliated to VTU
Vidya Vikas First Grade College (B.Com, BBM, BCA, BA), Mysuru
Affiliated to University of Mysuru
Vidya Vikas Law School, Mysuru
Affiliated of Karnataka State Law University Hubballi & Approved by Bar Council of India, New Delhi
Vidya Vikas Institute of Tourism & Hospitality Management, (BTHM), Mysuru
Affiliated to University of Mysuru
Vidya Vikas Department of Master of Tourism Administration (MTA) Mysuru
Affiliated to University of Mysuru
Vidya Vikas Department of Master of Social Work (MSW), Mysuru
Affiliated to University of Mysuru
Vidya Vikas Department of Master of Commerce (M.Com), Mysuru
Affiliated to University of Mysuru
Vidya Vikas Department of Master of Science - Mathemetics (M.Sc), Mysuru
Affiliated to University of Mysuru
Vidya Vikas Polytechnic & ITI, Mysuru
Recognised by DTE & AICTE
Vidya Vikas Pre-University College, Mysuru and Chamarajanagara
Recognised by Dept. of Pre-University Education Govt. of Karnataka
Vidya Vikas High School (English Medium), Mysuru
Approved by Govt. of Karnataka
Vidya Vikas Nursery and Primary School, Mysuru
Approved by Govt. of Karnataka
Vidya Vikas B.Ed., College, Mysuru
Recognised by NCTE Affilated to University of Mysuru

Campus: #127-128, Mysuru - Bannur Road, Alanahally Post, Mysuru - 570 028
Tel : (0821) 247 1232 / 247 1635, Fax : (0821) 247 3586
E-mail : info@vidyavikas.edu.in

Corporate Office: #10/7, A-8, Chabria Layout, Kumara Park East, Bengaluru - 560 001
Tel : (080) 2213 1569, Fax : (080) 2213 3157
E-mail : vvetco@vidyavikas.edu.in

E-mail: admissions@vidyavikas.edu.in ; www.vidyavikas.edu.in